## ಪ್ರತಿ ಕ್ವಿಂಟಲ್‌ಗೆ ₹6,783 ಬೆಂಬಲ ಬೆಲೆ ನಿಗದಿ

# ಶೇಂಗಾ ಖರೀದಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆಯಡಿ ಶೇಂಗಾ ಖರೀದಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಈ ವರ್ಷ ಶೇಂಗಾ ಸೇರಿ ರಾಜ್ಯದಲ್ಲಿ ಒಟ್ಟು ಎಂಟು ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆ ಅಡಿ ಖರೀದಿಸಲು ಒಪ್ಪಿಗೆ ಸಿಕ್ಕಿರುವುದು ಇದೇ ಮೊದಲು.

ಈಗಾಗಲೇ, ಬೆಂಬಲ ಬೆಲೆಯಡಿ ಉಂಡೆ ಕೊಬ್ಬರಿ, ಮಿಲ್ಲಿಂಗ್ ಕೊಬ್ಬರಿ, ಹೆಸರುಕಾಳು, ಉದ್ದಿನಕಾಳು, ಸೋಯಾಬಿನ್, ಸೂರ್ಯಕಾಂತಿ ಹಾಗೂ ಹತ್ತಿ ಖರೀದಿಸಲಾಗಿದೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್ ಶೇಂಗಾಕ್ಕೆ ಕನಿಷ್ಠ ₹2,500 ಹಾಗೂ ಗರಿಷ್ಠ ₹7,400 ದರ ('ಎ' ಗ್ರೇಡ್) ಇದೆ. ಮುಂಗಾರು ಅವಧಿಯಲ್ಲಿ ಬಿತ್ತನೆಯಾಗಿರುವ ಶೇಂಗಾ ಫಸಲು ಈಗ ಕಟಾವಿಗೆ ಬಂದಿದೆ.

ಕೆಲವೆಡೆ ರೈತರು ಈಗಾಗಲೇ ಕಟಾವು ಪೂರ್ಣಗೊಳಿಸಿ ಮಾರಾಟಕ್ಕೆ ಸಿದ್ಧತೆ ನಡೆಸಿದ್ದಾರೆ. ಬೆಲೆ ಇಳಿಕೆಯ ಆತಂಕಕ್ಕೆ ಸಿಲುಕಿದ್ದ ಬೆಳೆಗಾರರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ.

ಪ್ರತಿ ಕ್ವಿಂಟಲ್‌ಗೆ ₹6,783 ದರ ನಿಗದಿಪಡಿಸಲಾಗಿದೆ. ಬೆಂಬಲ ಬೆಲೆಯ ಮಾರ್ಗಸೂಚಿ ಅನ್ವಯ ಖರೀದಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಏಜೆನ್ಸಿ ನಿಗದಿ: 'ಬೆಲೆ ಕುಸಿತದಿಂದ ರೈತರು ದಿಕ್ಕೆಟ್ಟಿದ್ದಾರೆ. ಅವರಿಗೆ ನೆರವು ಕಲ್ಪಿಸುವ ನಿಟ್ಟಿನಲ್ಲಿ ಶೇಂಗಾ ಖರೀದಿಗೆ ಅನುಮತಿ ನೀಡಬೇಕು ಎಂದು ರಾಜ್ಯ ಸರ್ಕಾರವು ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಇದಕ್ಕೆ ಅನುಮತಿ ನೀಡಿದೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಶೇಂಗಾ ಖರೀದಿಗೆ ಕೇಂದ್ರ ಸರ್ಕಾರದಿಂದ ಎರಡು ಹಾಗೂ ರಾಜ್ಯ ಸರ್ಕಾರದಿಂದ ನಾಲ್ಕು ಏಜೆನ್ಸಿಗಳನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ.

ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರ ಆರಂಭಿಸಲು ಕೇಂದ್ರ ಸರ್ಕಾರದ ಏಜೆನ್ಸಿಗಳಾದ ನಾಫೆಡ್, ಎನ್‌ಸಿಸಿಎಫ್ ಹಾಗೂ ರಾಜ್ಯದ ಖರೀದಿ ಏಜೆನ್ಸಿಗಳೊಂದಿಗೆ ಸಮಾಲೋಚನೆ ನಡೆಸುವಂತೆ ಜಿಲ್ಲಾಮಟ್ಟದ ಕಾರ್ಯಪಡೆ ಸಮಿತಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಖರೀದಿ ಪ್ರಕ್ರಿಯೆಯಲ್ಲಿ ರೈತರಿಗೆ ಯಾವುದೇ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಈ ಬಗ್ಗೆ ಆಯಾ ಜಿಲ್ಲಾಧಿಕಾರಿ ಅವರು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

ನೋಂದಣಿ ಮತ್ತು ಖರೀದಿ ಪ್ರಕ್ರಿಯೆ ಆರಂಭಿಸುವ ಪೂರ್ವದಲ್ಲಿ ಅಗತ್ಯ ಸಿದ್ಧತೆ ಮಾಡಿಕೊಂಡರೆ ಗೊಂದಲಕ್ಕೆ ಅವಕಾಶ ಆಗುವುದಿಲ್ಲ. ಯಾವುದೇ, ಖರೀದಿ ಕೇಂದ್ರದ ಬಗ್ಗೆ ರೈತರಿಂದ ದೂರುಗಳು ಬರಬಾರದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

### ಯಾವ ಜಿಲ್ಲೆಯಲ್ಲಿ ಖರೀದಿ?

ಕೊಪ್ಪಳ, ಧಾರವಾಡ, ಹಾವೇರಿ, ಬಳ್ಳಾರಿ, ಚಿತ್ರದುರ್ಗ, ಗದಗ, ಬಾಗಲಕೋಟೆ, ದಾವಣಗೆರೆ, ರಾಯಚೂರು, ತುಮಕೂರು ಹಾಗೂ ವಿಜಯನಗರ

Prajavani
Pg.03,08

## ನಾನಾ ಬಗೆಯ ಮೇವುಗಳ ಪ್ರದರ್ಶನ, ವೈಜ್ಞಾನಿಕ ಮಾಹಿತಿ ಒದಗಿಸಿದ ಕಾರ್ಯಕ್ರಮ

# ರೈತರ ಕುತೂಹಲ ತಣಿಸಿದ 'ಮೇವು ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈನುಗಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುವ ಮೇವಿಗೆ ಸಂಬಂಧಿಸಿದಂತೆ ರೈತರು ಮಾಡಬಹುದಾದ ಅನೇಕ ಪ್ರಯೋಗಗಳು, ಮೇವು ಹೊಂದಿಸುವ, ಪೌಷ್ಟಿಕಾಂಶ ಒದಗಿಸುವ ಸುಲಭ ಮಾರ್ಗಗಳು ಅನಾವರಣಗೊಂಡವು. ರೈತರು ಕುತೂಹಲದಿಂದ ವೀಕ್ಷಿಸಿ ಮಾಹಿತಿ ಪಡೆದರು.

ಬೀದರ್‌ನಲ್ಲಿರುವ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ (ಕೆವಿಎಎಫ್‌ಎಸ್‌ಯು), ಹೆಬ್ಬಾಳದ ಪಶುವೈದ್ಯಕೀಯ ಕಾಲೇಜು, ಭಾರತೀಯ ಡೇರಿ ಅಸೋಸಿಯೇಶನ್ ಶುಕ್ರವಾರ ಪಶುವೈದ್ಯಕೀಯ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ 'ಮೇವು ಮೇಳ' ಇದಕ್ಕೆ ವೇದಿಕೆಯಾಯಿತು.



'ಮೇವು ಮೇಳ'ದಲ್ಲಿ ಆಸಕ್ತ ರೈತರು ವಿವಿಧ ಮೇವುತಳಿಗಳ ಮಾಹಿತಿ ಪಡೆದರು —ಪ್ರಜಾವಾಣಿ ಚಿತ್ರ

ಹೆಚ್ಚಿನ ಖನಿಜಾಂಶ ಇರುವ, ಬೇಸಿಗೆ-ಮಳೆಗಾಲ ಎರಡೂ ಋತುಗಳಲ್ಲಿ ಹಸಿರು ಮೇವು ನೀಡುವ 'ಮೇವಿನ ಸಜ್ಜೆ', ನೆಲ-ಹೊಲದ ಅಗತ್ಯವೇ ಇಲ್ಲದಂತೆ ಮನೆ ಮಹಡಿಯಲ್ಲಿಯೂ ಬೆಳೆಯಬಹುದಾದ ಜಲಕೃಷಿ ಮೇವಿನ ಬೆಳೆ, ಹಲವು ಬಾರಿ ಕಟಾವ್ ಮಾಡಬಹುದಾದ ಹೈಬ್ರಿಡ್ ನೇಪಿಯರ್ ಹುಲ್ಲು, ರೇಷ್ಮೆಗೂ ಮೇವಿಗೂ ಬಳಸಬಹುದಾದ ಹಿಪ್ಪು ನೇರಳೆ (ಮಲ್‌ಬೆರಿ), ನೇಪಿಯರ್ ಮತ್ತು ಜೋಳವನ್ನು ಕಸಿ ಮಾಡಿದ ಪುಲೆ ಜೈವಂತ್ ಹುಲ್ಲುಗಳು ಗಮನ ಸೆಳೆದವು. ಮೆಕ್ಕೆಜೋಳ, ತೊಕ್ಕೆ ಗೋಧಿ, ಸಜ್ಜೆ ಸಹಿತ ಮೇವಿನ ಸಿರಿಧಾನ್ಯಗಳು ವಿಶಿಷ್ಟವಾಗಿದ್ದವು.

ಮೇವು ಸಹಿತ ವಿವಿಧ ಕೃಷಿಗೆ ಬಳಸುವ ಅಡಿಕೆ ಹಾಳೆ ಗೊಬ್ಬರ, ಹಲಸಿನ ಹಣ್ಣಿನ ಗೊಬ್ಬರ, ಎರೆಹುಳು ಗೊಬ್ಬರ ಸಹಿತ ವಿವಿಧ ತರಹದ ಗೊಬ್ಬರಗಳನ್ನು ಪ್ರದರ್ಶಿಸಲಾಯಿತು. ಹಸಿರು ಮೇವಿನ ಗುಣ ಮತ್ತು ಅದರಲ್ಲಿರುವ ಪೌಷ್ಟಿಕಾಂಶಗಳು ಹಾಳಾಗದಂತೆ ಶೇಖರಿಸಿ ಮುಚ್ಚಿಟ್ಟು ಮಾಗಿಸಿದ ಮೇವನ್ನು ರಸಮೇವು (ಸೈಲೇಜ್) ಎಂದು ಕರೆಯಲಾಗುತ್ತಿದ್ದು, ಈ ಮೇವಿನ ಬಗ್ಗೆಯೇ ಹೈನುಗಾರರು ಹೆಚ್ಚು ಕುತೂಹಲಗೊಂಡರು.

ಪಾಚಿ ರೀತಿಯಲ್ಲಿ ಬೆಳೆಯುವ ಅಜೋಲ, ಏಕ ಕಟಾವ್ ದ್ವಿದಳ ಮೇವಿನ ಬೆಳೆಗಳಾದ ಗೋವಿನ ಜೋಳ, ಮೇವಿನ ಜೋಳ, ಮೇವಿನ ಅಲಸಂದಿ, ಹುರುಳಿ, ಸೋಯಾ ಅವರೆ, ಬಹುಕಟಾವು/ ಬಹು ವಾರ್ಷಿಕ ದ್ವಿದಳ ಮೇವಿನ ಬೆಳೆಗಳಾದ ಕುದುರೆ ಮಸಾಲೆ, ದಶರಥ ಹುಲ್ಲು, ಬೇಲಿ ಮೆಂತೆ, ನೇಪಿಯರ್ ಹುಲ್ಲು, ಉತ್ತಮವಾಗಿ ಇಳುವರಿ ನೀಡುವ ಗಿರಿಮೇವು, ಗಿನಿ ಹುಲ್ಲು, ರೋಡ್ಸ್ ಹುಲ್ಲು, ಬ್ರೆಕೇರಿಯ ಹುಲ್ಲು, ಕುದುರೆಮೆಂತೆ, ಸ್ಟೈಲೊ, ಸೂಪರ್ ನೇಪಿಯರ್, ಪ್ಯಾರಾ ಹುಲ್ಲು, ಬರ್ಸಿಮ, ಲೂಸರ್ನ್, ಚವಳಿ, ಮರ ಹುಲ್ಲುಗಳಾದ ಸುಬಾಬುಲ್, ಚೊಗಚೆಗಳು ಪ್ರದರ್ಶನಗೊಂಡವು.

ಉತ್ತಮ ಮೇವುಗಳ ಬೀಜೋತ್ಪಾದನೆ, ಬಿತ್ತನೆ, ಹೊಲದ ಸಿದ್ಧತೆ, ಪೋಷಕಾಂಶ ನಿರ್ವಹಣೆ, ಕಳೆ ನಿರ್ವಹಣೆ, ನಾಟಿ, ಬೆರಕೆ ಗಿಡ ತೆಗೆಯುವುದು, ನೀರಾವರಿ, ಕೊಯ್ಲು, ಸಂಸ್ಕರಣೆ, ಸಂಗ್ರಹಣೆಗಳ ಬಗ್ಗೆ ವೈಜ್ಞಾನಿಕ ಮಾಹಿತಿಯನ್ನು ವಿವಿಧ ಮಳಿಗೆಗಳಲ್ಲಿ ನೀಡಲಾಯಿತು.

ರಾಸುಗಳಿಗೆ ಸಮತೋಲಿತ ಆಹಾರದ ಮಾಹಿತಿ, ಕರುಗಳ ಆರಂಭಿಕ ಆಹಾರ, ಆನಂತರದ ಆಹಾರ, ಹೋರಿಗಳ ಆಹಾರ, ಗರ್ಭರಾಸುಗಳ ಆಹಾರಗಳ ಬಗ್ಗೆ ಮಾಹಿತಿ, ಶುದ್ಧ ಹಾಲು ಉತ್ಪಾದನೆಯ ಮಾಹಿತಿಗಳನ್ನು ವಿವಿಧ ಕೃಷಿ ಕಾಲೇಜುಗಳು ನೀಡಿದವು.

ಅಲಂಕಾರಿಕ ಮೀನು ಪಾಲನೆ, ಸುಧಾರಿತ ಹಂದಿ ಸಾಕಣೆಯ ಮಾಹಿತಿ, ಕೃಷಿ ಬಳಕೆಯ ವಸ್ತುಗಳು, ಹಾಲು ಕರೆಯುವ ಯಂತ್ರಗಳು, ನೀರಾವರಿಗೆ ಸಂಬಂಧಿಸಿದ ಯಂತ್ರಗಳು, ಕಟಾವು ಯಂತ್ರಗಳು ಕೂಡ ಇದ್ದವು.

### 'ಮೇವಿನ ವೆಚ್ಚ ಕಡಿಮೆಯಾಗಲಿ'

ಹೈನುಗಾರಿಕೆಯ ಆದಾಯದಲ್ಲಿ ಶೇ 70ರಷ್ಟು ಮೇವಿಗೆ ಖರ್ಚಾಗುತ್ತಿದೆ. ಇದನ್ನು ಕಡಿಮೆ ಮಾಡಿದರೆ ರೈತರ ಆದಾಯ ಹೆಚ್ಚಳವಾಗಲಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಮೇವು ಮೇಳ ಆಯೋಜಿಸಲಾಗಿದೆ ಎಂದು ಬೀದರ್ ಕೆವಿಎಎಫ್‌ಎಸ್‌ಯು ಕುಲಪತಿ ಕೆ.ಸಿ. ವೀರಣ್ಣ ತಿಳಿಸಿದರು.

ಮೇವು ಮೇಳ ಉದ್ಘಾಟಿಸಿ ಅವರು ಮಾತನಾಡಿ, 'ಹಸಿರು ಮೇವು ಅಧಿಕ ಬಳಕೆಯಾಗಬೇಕು. ಕಡಿಮೆ ವೆಚ್ಚದಲ್ಲಿ ಹಸಿರು ಮೇವು ಬೆಳೆಯುವುದು ಹೇಗೆ? ಬೀಜ ಸಂಸ್ಕರಣೆ ಸಹಿತ ವಿವಿಧ ವೈಜ್ಞಾನಿಕ ಮತ್ತು ಪ್ರಾಯೋಗಿಕ ಮಾಹಿತಿ ಈ ಮೇಳದಲ್ಲಿ ನೀಡಲಾಗುತ್ತಿದೆ' ಎಂದು ವಿವರಿಸಿದರು.




ರೈತ ಮಹಿಳೆಯರು ಮೇವುತಳಿಗಳ ಮಾಹಿತಿ ಪಡೆದರು —ಪ್ರಜಾವಾಣಿ ಚಿತ್ರ

# ಜಾಗತಿಕ ಬಿಕ್ಕಟ್ಟು: ದೇಶದ ರೈತರಿಗೆ ರಸಗೊಬ್ಬರ ಅಭಾವದ ಸಂಕಷ್ಟ

ರಷ್ಯಾ ಹಾಗೂ ಉಕ್ರೇನ್ ಮಧ್ಯೆ ಕೆಲ ವರ್ಷಗಳಿಂದ ಸಮರ ನಡೆಯುತ್ತಿದೆ. ಇಸ್ರೇಲ್-ಹಮಾಸ್, ಇಸ್ರೇಲ್-ಲೆಬನಾನ್ ಕಾಳಗವಂತೂ ತಾರಕಕ್ಕೇರಿದೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಏರಿಕೆಯಾಗುತ್ತಿದೆ. ಹಾಗಾಗಿ, ಭಾರತದಲ್ಲಿ ತೈಲ ಬೆಲೆ ಏರಿಕೆಯ ಭೀತಿ ಎದುರಾಗಿದೆ. ಇದರ ಬೆನ್ನಲ್ಲೇ, ಜಾಗತಿಕ ಬಿಕ್ಕಟ್ಟಿನಿಂದಾಗಿ ದೇಶದ ಹಲವು ರಾಜ್ಯಗಳ ರೈತರಿಗೆ ರಸಗೊಬ್ಬರ ಪೂರೈಕೆಯ ಅಭಾವ ಕಾಡುತ್ತಿದೆ. ಅದರಲ್ಲೂ, ಪಂಜಾಬ್, ಮಧ್ಯಪ್ರದೇಶದ ರೈತರಿಗೆ ಭಾರಿ ಪ್ರಮಾಣದಲ್ಲಿ ರಸಗೊಬ್ಬರದ ಕೊರತೆ ಉಂಟಾಗಿದೆ ಎಂದು ತಿಳಿದುಬಂದಿದೆ.

**2.12** ಲಕ್ಷ ಟನ್
ಪಂಜಾಬ್‌ಗೆ ಪೂರೈಕೆಯಾಗುತ್ತಿರುವ ರಸಗೊಬ್ಬರ ಪ್ರಮಾಣ

**1.38** ಲಕ್ಷ ಮೆಟ್ರಿಕ್ ಟನ್
ಮಧ್ಯಪ್ರದೇಶ ರೈತರಿಗೆ ಪೂರೈಕೆಯಾಗುತ್ತಿರುವ ಡಿಎಪಿ



**5.5** ಲಕ್ಷ ಟನ್
ಹಿಂಗಾರು ಬೆಳೆಗೆ ಪಂಜಾಬ್‌ಗೆ ಅಗತ್ಯವಿರುವ ಡಿಎಪಿ


**7** ಲಕ್ಷ ಮೆಟ್ರಿಕ್ ಟನ್
ಮಧ್ಯಪ್ರದೇಶಕ್ಕೆ ಹಿಂಗಾರು ಬೆಳೆಗಾಗಿ ಬೇಕಾಗುವ ರಸಗೊಬ್ಬರ

**8.5** ಲಕ್ಷ ಟನ್
ಪಂಜಾಬ್ ರೈತರಿಗೆ ವಾರ್ಷಿಕವಾಗಿ ಬೇಕಾಗುವ ರಸಗೊಬ್ಬರ

**60%** ಹಿಂಗಾರು ಬೆಳೆಗಾಗಿ ಭಾರತ ಆಮದು ಮಾಡಿಕೊಳ್ಳುವ ಡಿಎಪಿ ಪ್ರಮಾಣ

### ಯಾವ ದೇಶಗಳಿಂದ ಡಿಎಪಿ ಆಮದು?

ಹಿಂಗಾರು ಬೆಳೆಗಾಗಿ ರಷ್ಯಾ, ಮೊರಾಕ್ಕೊ, ಸೌದಿ ಅರೇಬಿಯಾ, ಚೀನಾದಿಂದ ಡಿಎಪಿ ಆಮದು.



### ವಿಳಂಬ ಏಕೆ?



ರಷ್ಯಾ-ಉಕ್ರೇನ್ ಕಾಳಗ ಸೇರಿ ಹಲವು ರಾಷ್ಟ್ರಗಳ ಮಧ್ಯೆ ಸಂಘರ್ಷ ಉಂಟಾಗಿರುವ ಕಾರಣ ಡಿಎಪಿ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಅದರಲ್ಲೂ, ಹೆಚ್ಚಿನ ಪ್ರಮಾಣದ ಡಿಎಪಿಯು ಸುಯೇಜ್ ಕಾಲುವೆ ಮೂಲಕವೇ ಭಾರತಕ್ಕೆ ಸಾಗಣೆ ಮಾಡಲಾಗುತ್ತಿದೆ. ಸಂಘರ್ಷಗಳಿಂದಾಗಿ ಈ ಮಾರ್ಗದ ಮೂಲಕ ಪೂರೈಕೆಯಾಗುವುದು ವಿಳಂಬವಾಗುತ್ತಿದೆ.

“ ಮಧ್ಯಪ್ರದೇಶದಲ್ಲಿ ರೈತರಿಗೆ ಸಮರ್ಪಕವಾಗಿ ಡಿಎಪಿ ಪೂರೈಕೆಯಾಗುತ್ತಿಲ್ಲ. ರಸಗೊಬ್ಬರ ಪೂರೈಕೆಯಾಗದೆ ರೈತರು ಪರದಾಡುತ್ತಿದ್ದರೂ ಬಿಜೆಪಿ ಸರಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ. ಸರಕಾರವು ರೈತ ವಿರೋಧಿ ನೀತಿ ಅನುಸರಿಸುತ್ತಿದೆ.

**-ದಿಗ್ವಿಜಯ್ ಸಿಂಗ್**
ಕಾಂಗ್ರೆಸ್ ಹಿರಿಯ ನಾಯಕ


“ ರಸಗೊಬ್ಬರ ಪೂರೈಕೆಯಲ್ಲಿ ವಿಳಂಬವಾಗಿದೆ ನಿಜ. ಆದರೆ, ರೈತರಿಗೆ ಅಗತ್ಯವಿರುವ ಡಿಎಪಿ ಪೂರೈಕೆ ಮಾಡುವಷ್ಟು ದಾಸ್ತಾನು ಇದೆ. ಹಿಂಗಾರು ಬೆಳೆಗೆ ಡಿಎಪಿ ಕೊರತೆ ಆಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

**-ಶಿವರಾಜ್ ಸಿಂಗ್ ಚೌಹಾಣ್**
ಕೇಂದ್ರ ಕೃಷಿ ಸಚಿವ

VijayaKarnataka Pg.04

# ಶೇಂಗಾ ಖರೀದಿಗೆ ಕೇಂದ್ರ ಸಮ್ಮತಿ

**ಬೆಂಗಳೂರು:** ಬೆಂಬಲ ಬೆಲೆಯಲ್ಲಿ ಶೇಂಗಾ ಖರೀದಿಗೆ ಅನುಮತಿ ನೀಡಬೇಕು ಎಂಬ ರಾಜ್ಯ ಸರ್ಕಾರದ ಮನವಿಗೆ ಕೇಂದ್ರ ಸರ್ಕಾರ ಸಮ್ಮತಿಸಿದ್ದು, ಪ್ರತಿ ಕ್ವಿಂಟಾಲ್‌ಗೆ 6,783 ರೂ. ನಿಗದಿಪಡಿಸಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಮಾಹಿತಿ ನೀಡಿದ್ದಾರೆ. ಮಾರ್ಗಸೂಚಿ ಅನ್ವಯ ಕೊಪ್ಪಳ, ಧಾರವಾಡ, ಹಾವೇರಿ, ಬಳ್ಳಾರಿ, ಚಿತ್ರದುರ್ಗ, ಗದಗ ಮತ್ತು ಬಾಗಲಕೋಟ, ದಾವಣಗೆರೆ, ರಾಯಚೂರು, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳ ರೈತರಿಂದ ಖರೀದಿಗೆ ಅನುಮತಿ ದೊರೆತಿದೆ. ಖರೀದಿಗೆ ಕೇಂದ್ರ ಸರ್ಕಾರದಿಂದ ಎರಡು, ರಾಜ್ಯ ಸರ್ಕಾರದಿಂದ ನಾಲ್ಕು ಏಜೆನ್ಸಿಗಳನ್ನು ಗುರುತಿಸಲಾಗಿದೆ. ನಫೆಡ್, ಎನ್‌ಸಿಎಫ್ ಹಾಗೂ ಖರೀದಿ ಏಜೆನ್ಸಿಗಳೊಂದಿಗೆ ಸಮಾಲೋಚಿಸಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ಆರಂಭಿಸಬೇಕು ಎಂದು ತಿಳಿಸಿದ್ದಾರೆ.



Vijayavani Pg.7c

WORLD SUSTAINABILITY DAY


# Class 10 dropout adopts natural farming, becomes millionaire

RISHITA KHANNA @Bengaluru

FROM a being class 10 dropout to running a business with over Rs 1 crore income annually, Lohith Shetty from Dakshina Kannada proved that learning can happen beyond the classroom. Forced to leave school due to financial struggles, Lohith turned to cultivating exotic fruits like rambutan, dragon fruit, and mangosteen.

It all started in 2006 when Lohith, 42, realised that the traditional crops his family farmed, such as rubber and areca nut, were costly to maintain, with labour expenses cutting deep into profits. Searching for a better way to utilise their family land, he then started research about other crops and then purchased saplings of rambutan and mangosteen from Kerala and planted them on his farm in Dakshina Kannada.

Hailing from a family of farmers, Lohith witnessed the hardwork of his father and uncles on their 21-acre farm. When he could not study further, Lohith ventured into various small businesses, including running a shop and a restaurant, but a job on a farm in Dharmasthala, which his friend recommended, proved transformative.



In about eight years, his expertise in growing these unique fruits expanded, and today, Lohith not only manages his own farm and nursery but also helps other people start their own ventures.

In over a decade, he gained firsthand experience in cultivating exotic fruits, acquiring essential skills and knowledge that would lay the foundation for his future success. "From their ideal growing conditions to their cultivation methods, working on the farm taught me everything about these fruits," Lohith said.

Lohith returned to Dakshina Kannada in 2016 and leased 20 acres of land, combining it with the 21 acres owned by his family to create a substantial farming operation. He now not only produces these unique fruits for sale but also shares his knowledge with other farmers, contributing to his annual income of over Rs 1 crore. "We nurture the plants for three years, and once they start yielding well, the owners take over," he noted, explaining how he has been helping other farmers. Lohith currently cultivates rambutan across 12 acres, maintains 500 dragon fruit plants, and integrates mangosteen as an intercrop within his areca nut plantation. He sells rambutan for Rs 180 to Rs 300 per kg, mangosteen for Rs 350 to Rs 750 per kg, and dragon fruit for Rs 100 to Rs 150 per kg.